**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.1376/2025**

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗರಾಜ್ ಪೂಜಾರ್ | ***C.W-5*** |
| ತಂದೆಯ ಹೆಸರು | : ರುದ್ರಪ್ಪ | ***P.W-3*** |
| ವಯಸ್ಸು | : ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸ | : ಅಂತ್ರವಳ್ಳಿ | |

**ದಿನಾಂಕಃ 21.04.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ 01 ನನ್ನ ತಮ್ಮ. ಚಾಸಾ 04 ನನ್ನ ತಂದೆ. ಆರೋಪಿತರು ನಮ್ಮ ಊರಿನವರು. ಆರೋಪಿತರು ಕುರಿ ಕಾಯುವ ಕೆಲಸ ಮಾಡುತ್ತಾರೆ. ಅವರ ಕುರಿಗಳು ನಮ್ಮ ಜಮೀನನ್ನು ಮೇದಿದ್ದರಿಂದ ನಮ್ಮ ಹಾಗೂ ಆರೋಪಿತರ ಮಧ್ಯೆ ಬಾಯಿ ಮಾತಿನ ಗಲಾಟೆ ಆಗಿತ್ತು. ಆ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದೆವು. ಅದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಸಂದರ್ಭದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸ.ಸ.ಅಭಿಯೋಜಕರಿಂದಃ**

ಅಂತರವಳ್ಳಿ ಗ್ರಾಮದ ಸರ್ವೆ ನಂಃ 147/09 ಇದು 03 ಎಕ್ರೆ 12 ಗುಂಟೆ ಇರುತ್ತದೆ ಎಂದರೆ ಸರಿ. ಅದರ ಪಕ್ಕದಲ್ಲಿ ತುಂಗಾ ನದಿಯ ಕಾಲುವೆ ಇದ್ದು ಅಲ್ಲಿ ರೈತರ ದನ ಕರುಗಳು ಓಡಾಡುತ್ತವೆ ಎಂದರೆ ಸರಿ. ಅದೇ ರಸ್ತೆಯಲ್ಲಿ ಆರೋಪಿತರ

ಕುರಿಗಳೂ ಸಹ ಓಡಾಡುತ್ತಿದ್ದವು ಎಂದರೆ ಸರಿ. ಆಗ ಆರೋಪಿತರ ಕುರಿಗಳು ನಮ್ಮ ಜಮೀನಿನಲ್ಲಿ ಓಡಾಡುತ್ತಿದ್ದವು ಎಂದರೆ ಸರಿ. ಆ ಕುರಿತು ಹಿರಿಯರ ಮೂಲಕ ಆರೋಪಿತರಿಗೆ ಬುದ್ಧಿ ಮಾತು ಹೇಳಿದ್ದೆವು ಎಂದರೆ ಸರಿ. ಆ ಕಾರಣಕ್ಕಾಗಿ ನಮ್ಮ ಹಾಗೂ ಆರೋಪಿತರ ಮಧ್ಯೆ ವೈಷಮ್ಯ ಇತ್ತು ಎಂದರೆ ಸರಿ.

2. ದಿನಾಂಕಃ 11.01.2025 ರಂದು ಮಧ್ಯಾಹ್ನ 03.30 ರ ಸುಮಾರಿಗೆ ನಾನು ಹಾಗೂ ಚಾಸಾ 1 ಮತ್ತು 4 ಜಮೀನಿನಲ್ಲಿ ಕೆಲಸ ಮಾಡುವ ಕಾಲಕ್ಕೆ 01 ನೇ ಆರೋಪಿತನ 30-40 ಕುರಿಗಳು ನಮ್ಮ ಹೊಲಕ್ಕೆ ಬಂದು ಗೋವಿನ ಜೋಳದ ಬೆಳೆಯನ್ನು ತಿಂದಿದ್ದವು ಆಗ ನಾವು ಆ ಬಗ್ಗೆ ವಿಚಾರಿಸಿದಾಗ 01 ನೇ ಆರೋಪಿ ಏಕಾಏಕಿ ಅವ್ಯಾಚ್ಯ ಶಬ್ಧಗಳಿಂದ ಬೈದು ನನಗೆ ಮತ್ತು ಚಾಸಾ 01 ಮತ್ತು 04 ಇವರಿಗೆ ಸಹ ಬೈದಿರುತ್ತಾರೆ ಆಗ ಉಳಿದ ಆರೋಪಿತರು ಸಹ ಅಲ್ಲಿಗೆ ಬಂದು ನಮ್ಮ ಜೊತೆ ಜಗಳ ಮಾಡಿ ಅವ್ಯಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 05 ನೇ ಆರೋಪಿ ಚಾಸಾ 04 ಇವರಿಗೆ ಕೋಲಿನಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 02 ನೇ ಆರೋಪಿಯು ಸಹ ಚಾಸಾ 04 ಇವರಿಗೆ ಕೈಯಿಂದ ಹೊಡಿ ಬಡಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. 01 ನೇ ಆರೋಪಿ ನನಗೆ ಬಡಿಗೆಯಿಂದ ಹೊಡೆದು ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. 04 ಮತ್ತು 06 ನೇ ಆರೋಪಿತರು ಚಾಸಾ 01 ಇವರ ಮೇಲೆ ಕೈಯಿಂದ ಹಲ್ಲೆ ಮಾಡಿರುತ್ತಾರೆ ಹಾಗೂ 06 ನೇ ಆರೋಪಿತನು ಕಲ್ಲಿನಿಂದ ಚಾಸಾ 01 ರವರ ಎಡರಟ್ಟೆಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ನಾವು ಕೂಗಾಡಿದ್ದರಿಂದ ಚಾಸಾ 06 ರಿಂದ 08 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹೋಗುವಾಗ ಜೀವದ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಂತರ ಹಿರಿಯರೊಂದಿಗೆ ಮಾತನಾಡಿ ನಿಪಿ 01 ರಂತೆ ದಿನಾಂಕಃ 14.01.2025 ರಂದು ನನ್ನ ತಮ್ಮ ಚಾಸಾ 01 ದೂರು ನೀಡಿದ ಬಗ್ಗೆ ಮಾಹಿತಿ ಇರುವುದಿಲ್ಲ. ಆ ಕುರಿತು ದಿನಾಂಕಃ 16.01.2025 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 08 ಅಂತಾ ಗುರುತಿಸಲಾಯಿತು.

3. ನಿಪಿ 08 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ರಾಜಿಯಾಗಿ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಆ ದಿನ ಹಲ್ಲೆಗೆ ಬಳಸಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಎಮ್ ಕೆ ಕೆ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಅಂತಾ ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.